ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೧**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೆಂಟನೆಯ ಅಧಿವೇಶನ**
**(ಮುಂದುವರೆದ ಉಪವೇಶನಗಳು)**
**ಮಂಗಳವಾರ, ದಿನಾಂಕ: ೧೭ನೇ ಮಾರ್ಚ್, ೨೦೨೬**

---

## ಸಮೂಹ – II

೧. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

೨. ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

೩. ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು

೪. ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು

೫. ಪೌರಾಡಳಿತ ಮತ್ತು ಹಜ್ ಸಚಿವರು

೬. ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

---

## ಕಲಬುರಗಿ ಜಿಲ್ಲೆಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ಕಾರ್ಯಕ್ಷಮತೆ ಮತ್ತು ಉತ್ತೇಜನದ ಕುರಿತು

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೧ (೧೫೩೯) ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯ ವ್ಯಾಪ್ತಿಯಲ್ಲಿರುವ ಒಟ್ಟು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು ಹಾಗೂ ಅವುಗಳ ವಾರ್ಷಿಕ ಒಟ್ಟು

ಉತ್ಪಾದನಾ ಸಾಮರ್ಥ್ಯ (Installed Capacity) ಎಷ್ಟು ; (ಘಟಕವಾರು ಮತ್ತು ವಲಯವಾರು ಮಾಹಿತಿ ನೀಡುವುದು)

(ಆ) ಪ್ರಸ್ತುತ ಜಿಲ್ಲೆಯ ಸಿಮೆಂಟ್ ಮತ್ತು ಬೇಳೆ ಸಂಸ್ಕರಣಾ (Dal Mills) ಘಟಕಗಳು ಸೇರಿದಂತೆ ಪ್ರಮುಖ ಕೈಗಾರಿಕೆಗಳ ಸರಾಸರಿ ಉತ್ಪಾದನಾ ಬಳಕೆ (Capacity Utilization) ಶೇಕಡಾವಾರು ಎಷ್ಟಿದೆ ; ಕಳೆದ ಮೂರು ವರ್ಷಗಳಲ್ಲಿ ಉತ್ಪಾದನಾ ಪ್ರಮಾಣದಲ್ಲಿ ಏರಿಳಿತವಾಗಿದೆಯೇ ;

(ಇ) ಸದರಿ ಜಿಲ್ಲೆಯಲ್ಲಿ ಸ್ಥಗಿತಗೊಂಡಿರುವ (Sick Units) ಅಥವಾ ಉತ್ಪಾದನಾ ಕುಸಿತ ಕಂಡಿರುವ ಬೃಹತ್ ಮತ್ತು ಮಧ್ಯಮ ಘಟಕಗಳ ಸಂಖ್ಯೆ ಎಷ್ಟು ; ಈ ಕುಸಿತಕ್ಕೆ ಕಚ್ಚಾ ವಸ್ತುಗಳ ಕೊರತೆ ಅಥವಾ ಮೂಲಭೂತ ಸೌಕರ್ಯಗಳ ಕೊರತೆ ಕಾರಣವಾಗಿದೆಯೇ ;

(ಈ) ಈ ಜಿಲ್ಲೆಯನ್ನು "ಬೇಳೆ ನಾಡು" ಮತ್ತು "ಸಿಮೆಂಟ್ ಹಬ್" ಎಂದು ಪರಿಗಣಿಸಿ, ಇಲ್ಲಿನ ಉತ್ಪಾದನೆ ಹೆಚ್ಚಿಸಲು ಮತ್ತು ರಫ್ತು ಉತ್ತೇಜಿಸಲು ಸರ್ಕಾರದಿಂದ ವಿಶೇಷ "ಕೈಗಾರಿಕಾ ಕ್ಲಸ್ಟರ್" ಅಥವಾ ಪ್ರೋತ್ಸಾಹ ಯೋಜನೆಗಳನ್ನು ಜಾರಿಗೆ ತರಲಾಗಿದೆಯೇ ;

(ಉ) ಕಲಬುರಗಿ ಜಿಲ್ಲೆಯಿಂದ ವಿದೇಶಗಳಿಗೆ ರಫ್ತು ಮಾಡುವ (Export Oriented Units) ಘಟಕಗಳ ಸಂಖ್ಯೆ ಎಷ್ಟು ಮತ್ತು ಕಳೆದ ಆರ್ಥಿಕ ವರ್ಷದಲ್ಲಿ ಈ ಘಟಕಗಳಿಂದ ವಿದೇಶಿ ವಿನಿಮಯಕ್ಕೆ ಎಷ್ಟು ಕೊಡುಗೆ ನೀಡಲಾಗಿದೆ ?

## ಮೂಲಭೂತ ಸೌಲಭ್ಯಗಳ ಕೊರತೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೨ (೧೪೫೬) ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಬರಬೇಕಾಗಿದ್ದ ಹಲವಾರು ಉದ್ದಿಮೆಗಳು ನೆರೆ ರಾಜ್ಯಗಳ ಪಾಲಾಗುತ್ತಿರುವುದು ಸರಕಾರದ

ಗಮನಕ್ಕೆ ಬಂದಿದೆಯೇ ; ಈ ಕುರಿತು ಸರಕಾರದ ನಿಲುವೇನು ; (ವಿವರ ನೀಡುವುದು)

(ಆ) ಕಳೆದ ಎರಡು ವರ್ಷಗಳಲ್ಲಿ ಎಷ್ಟು ಹೊಸ ಉದ್ದಿಮೆಗಳಿಗಾಗಿ ಜಾಗ ನೀಡಲಾಗಿದೆ ; ಇದರಿಂದ ಎಷ್ಟು ಉದ್ಯೋಗ ಲಭಿಸಿದೆ ; (ವಿವರ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ಮೊತ್ತದ ಹೂಡಿಕೆ ಮಾಡಲಾಗಿದೆ ; ಇದರಿಂದ ಸೃಷ್ಟಿಯಾದ ಉದ್ಯೋಗಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ವಿಜಯಪುರ ಮಹಾನಗರದ ಕಸದ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೩ (೧೫೪೦) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಿಜಯಪುರ ನಗರದಲ್ಲಿರುವ ಜಗತ್ಪ್ರಸಿದ್ಧ ಗೋಲಗುಮ್ಮಟ ಸೇರಿದಂತೆ ವಿವಿಧ ಪ್ರಾಚೀನ ಐತಿಹಾಸಿಕ ಸ್ಮಾರಕಗಳ ಸುತ್ತಮುತ್ತ ಕಸದ ರಾಶಿ ಬಿದ್ದಿರುವುದು ಮತ್ತು ನೈರ್ಮಲ್ಯದ ಕೊರತೆಯ ಬಗ್ಗೆ ಮಾನ್ಯ ಲೋಕಾಯುಕ್ತರು ಇತ್ತೀಚಿನ ಭೇಟಿಯ ಸಂದರ್ಭದಲ್ಲಿ ತೀವ್ರ ಅಸಮಾಧಾನ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ಸ್ಮಾರಕಗಳ ಸಂರಕ್ಷಣೆ ಮತ್ತು ಸುತ್ತಮುತ್ತಲಿನ ಪರಿಸರದ ಸ್ವಚ್ಛತೆಯನ್ನು ಕಾಪಾಡುವಲ್ಲಿ ಸ್ಥಳೀಯ ಮಹಾನಗರಪಾಲಿಕೆ ಹಾಗೂ ಸಂಬಂಧಪಟ್ಟ ಇಲಾಖೆಗಳು ವಿಫಲವಾಗಲು ಕಾರಣಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಲೋಕಾಯುಕ್ತರ ಭೇಟಿ ಮತ್ತು ಅವರ ನಿರ್ದೇಶನಗಳ ನಂತರ, ಸ್ಮಾರಕಗಳ ಆವರಣದಲ್ಲಿ ಶೇಖರಣೆಯಾಗಿರುವ ಕಸವನ್ನು ವಿಲೇವಾರಿ ಮಾಡಲು ಸರ್ಕಾರವು ಕೈಗೊಂಡಿರುವ ತುರ್ತು ಕ್ರಮಗಳೇನು ;

(ಈ) ಐತಿಹಾಸಿಕ ಸ್ಮಾರಕಗಳ ಘನತೆ ಮತ್ತು ಪ್ರವಾಸೋದ್ಯಮದ ದೃಷ್ಟಿಯಿಂದ, ಈ ಪ್ರದೇಶಗಳಲ್ಲಿ ಕಸ ಸುರಿಯುವುದನ್ನು ತಡೆಯಲು ಮತ್ತು ಶಾಶ್ವತವಾಗಿ ನೈರ್ಮಲ್ಯವನ್ನು ಕಾಯ್ದುಕೊಳ್ಳಲು ಸರ್ಕಾರವು ರೂಪಿಸಿರುವ ವಿಶೇಷ ಯೋಜನೆ ಅಥವಾ ಕ್ರಮಗಳೇನು ?

## ಅಕ್ರಮ ರಫ್ತು ಆಗಿರುವುದರಿಂದ ಸರ್ಕಾರಕ್ಕೆ ಆಗಿರುವ ನಷ್ಟದ ಬಗ್ಗೆ

**ಶ್ರೀ ಗೋವಿಂದ ರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೪ (೧೪೮೭) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲೋಕಾಯುಕ್ತ ಸಂಸ್ಥೆ ತನಿಖಾ ಅಂದಾಜಿನಂತೆ ೨೦೦೬ ರಿಂದ ೨೦೧೦ರ ಅವಧಿಯಲ್ಲಿ ೨.೯೮ ಕೋಟಿ ಟನ್ ಅದಿರು ಅಕ್ರಮ ರಫ್ತು ಆಗಿರುವುದರಿಂದ ರಾಜ್ಯದ ಖಜಾನೆಗೆ ೧೨.೨೨೮ ಕೋಟಿ ರೂ.ಗಳ ನಷ್ಟವುಂಟಾಗಿರುವುದು ನಿಜವೇ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಹಾಗಿದ್ದಲ್ಲಿ, ಅಕ್ರಮ ಮಾಡಿರುವ ವ್ಯಕ್ತಿ/ಸಂಸ್ಥೆಗಳು ಯಾವುವು ಹಾಗೂ ಇವರ ಮೇಲೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು ;

(ಇ) ಅಕ್ರಮ ಗಣಿಗಾರಿಕೆಯ ಶೇ. ೯೨.೪ ರಷ್ಟು ಪ್ರಕರಣಗಳು ತನಿಖೆಗೆ ಒಳಪಡದೆ ಇರುವುದರಿಂದ, ಲೂಟಿಯಾದ ಬಹು ಲಕ್ಷ ಕೋಟಿ ರೂ. ಸಂಪತ್ತು ಖಜಾನೆಗೆ ಹಿಂತಿರುಗಿಲ್ಲದಿರುವುದು ನಿಜವೇ ;

(ಈ) ಹಾಗಿದ್ದಲ್ಲಿ, ಇದಕ್ಕೆ ಕಾರಣಕರ್ತರು ಯಾರು ; ಇಷ್ಟು ದೊಡ್ಡ ಮೊತ್ತದ ಹಣವನ್ನು ಸರ್ಕಾರ ಮರಳಿಪಡೆಯಲು ತೆಗೆದುಕೊಂಡ ಕ್ರಮವೇನು ? (ಸಂಪೂರ್ಣ ವಿವರ ನೀಡುವುದು)

## ಭದ್ರಾವತಿ ನಗರದ UGD ಬಗ್ಗೆ

**ಶ್ರೀಮತಿ ಬಲ್ಕೀಸ್ ಬಾನು (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೫ (೧೫೦೬) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಭದ್ರಾವತಿ ನಗರದಲ್ಲಿ KMRP (Karnataka Municipal Reforms Project) ವತಿಯಿಂದ UGD ನಿರ್ಮಾಣ ಮಾಡಿದ ವರ್ಷ ಹಾಗೂ ಮಂಜೂರಾದ ಅನುದಾನ ಎಷ್ಟು ;

(ಆ) ಭದ್ರಾವತಿ Old Town ನಲ್ಲಿ UGDಗೆ ಬಿಡುಗಡೆಯಾದ ಮತ್ತು ಖರ್ಚಾದ ವೆಚ್ಚ ಎಷ್ಟು ;

(ಇ) ಭದ್ರಾವತಿ UGDಯನ್ನು ಯಾರು ನಿರ್ವಹಣೆ ಮಾಡಬೇಕು ; ಇದಕ್ಕೆ ಇರುವ ಮಾನದಂಡಗಳೇನು ;

(ಈ) ಭದ್ರಾವತಿ Old Town ನಗರ ಪ್ರದೇಶದಲ್ಲಿ UGDಯಲ್ಲಿ ಸಮಸ್ಯೆಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರದ ಕ್ರಮವೇನು ?

## ಅಡಿಕೆ ಕ್ಯಾನ್ಸರ್‌ಕಾರಕ ಎಂಬ ಅಪಪ್ರಚಾರವನ್ನು ತೊಡೆದು ಹಾಕುವ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೫೬ (೧೫೫೩) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಡಿಕೆ ಹಾಗೂ ಅಡಿಕೆ ಹಾಳೆ ತಟ್ಟೆಯು ಕ್ಯಾನ್ಸರ್‌ಕಾರಕ ಎಂಬ ಅಪಪ್ರಚಾರ ಆ ಬೆಳೆಗೆ ಕಂಟಕವಾಗಿದ್ದು ಅಡಿಕೆಗೆ ಅಂಟಿದ ಕಳಂಕವನ್ನು ಸಂಶೋಧನೆಗಳ ಮೂಲಕವೇ ತೊಡೆದು ಹಾಕಬೇಕಾದ ಅನಿವಾರ್ಯತೆ ದಟ್ಟವಾಗಿ ಸೃಷ್ಟಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಅಡಿಕೆ ಉತ್ಪನ್ನಗಳ ಬಗ್ಗೆ ವ್ಯಾಪಕ ಸಂಶೋಧನೆಗೆ ಸರ್ಕಾರ ಇದುವರೆಗೆ ಕೈಗೊಂಡಿರುವ ಕ್ರಮಗಳೇನು ;

(ಇ) ನೂರಾರು ವರ್ಷಗಳಿಂದ ಜನರು ಅಡಿಕೆಯನ್ನು ಬಳಕೆ ಮಾಡುತ್ತಿದ್ದು, ಅಡಿಕೆ ಹಾನಿಕಾರಕವಲ್ಲ ಮತ್ತು ಕ್ಯಾನ್ಸರ್‌ಕಾರಕವಲ್ಲ ಎಂಬ ಸಂಗತಿಯನ್ನು

ಅಂತರರಾಷ್ಟ್ರೀಯ ಮಟ್ಟದಲ್ಲಿ ಪ್ರಚುರ ಪಡಿಸಬೇಕಾದ ವ್ಯಾಪಕ ಅನಿವಾರ್ಯತೆ ಇದ್ದು, ಸಂಬಂಧ ಸರ್ಕಾರ ಇದುವರೆಗೆ ಸಾಧಿಸಿರುವ ಪ್ರಗತಿ ವಿವರಗಳೇನು ;

(ಈ) ಅಂತರರಾಷ್ಟ್ರೀಯ ಮಟ್ಟದಲ್ಲಿ ಅಡಿಕೆ ಬಗ್ಗೆ ಋಣಾತ್ಮಕ ಭಾವನೆ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಅಡಿಕೆ ಉತ್ಪನ್ನಗಳ ಬಗ್ಗೆ ವ್ಯಾಪಕ ಸಂಶೋಧನೆಗೆ ಸರ್ಕಾರ ಈ ಹಂತದಲ್ಲಾದರೂ ವ್ಯವಸ್ಥಿತ ಕ್ರಮಗಳನ್ನು ತೆಗೆದುಕೊಳ್ಳುವುದೇ ?

## ಕೈಗಾರಿಕಾ ಪ್ರದೇಶಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಅನುದಾನ ನೀಡುವ ಬಗ್ಗೆ

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೧೫೭ (೧೫೪೯) ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕೈಗಾರಿಕಾ ಪ್ರದೇಶಗಳ ಮೂಲಭೂತ ಸೌಕರ್ಯ ಅಭಿವೃದ್ಧಿಗೆ ವಿಶೇಷ ಅನುದಾನವನ್ನು ಈ ಸಾಲಿನ ಆಯವ್ಯಯದಲ್ಲಿ ನೀಡುವುದರ ಬಗ್ಗೆ ಸರ್ಕಾರ ಚಿಂತಿಸಿದೆಯೇ ; ಹಾಗಿದ್ದಲ್ಲಿ, ಎಷ್ಟು ಅನುದಾನವನ್ನು ನೀಡುತ್ತಿದೆ ;

(ಆ) ರಾಜ್ಯದ ಜಿಲ್ಲೆಗಳಲ್ಲಿ ಕೈಗಾರಿಕಾ ಟೌನ್‌ಶಿಪ್‌ಗಳ ಸ್ಥಾಪನೆ ಮಾಡುವ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ ; ಹಾಗಿದ್ದಲ್ಲಿ, ಈ ಕೈಗಾರಿಕಾ ಟೌನ್‌ಶಿಪ್‌ಗಳ ಸ್ಥಾಪನೆಗೆ ಎಷ್ಟು ಅನುದಾನ ನೀಡಲಾಗುವುದು ; ಇದನ್ನು ಯಾವಾಗ ಪ್ರಾರಂಭಿಸಲಾಗುವುದು ; (ಇದರ ಕಾರ್ಯಚಟುವಟಿಕೆಗಳ ವಿವರ ನೀಡುವುದು)

(ಇ) ಈ ಕೈಗಾರಿಕಾ ಟೌನ್‌ಶಿಪ್‌ಗಳ ಸ್ಥಾಪನೆಯಿಂದ ರಾಜ್ಯದ ನಿರುದ್ಯೋಗಿಗಳಿಗೆ ಉದ್ಯೋಗ ಅವಕಾಶ ಕಲ್ಪಿಸಲಾಗುವುದೇ ; ಹಾಗಿದ್ದಲ್ಲಿ, ಎಷ್ಟು ಜನರಿಗೆ ಉದ್ಯೋಗ ಅವಕಾಶ ಸಿಗಲಿದೆ ?

## ಮುದುಗಲ್ ಪಟ್ಟಣಕ್ಕೆ
## ಕುಡಿಯುವ ನೀರಿನ ಯೋಜನೆಯ ಕುರಿತು

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೮ (೧೪೮೧) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಮುದುಗಲ್ಲ ಪಟ್ಟಣಕ್ಕೆ KUIDFC ವತಿಯಿಂದ ಕುಡಿಯುವ ನೀರು ಸರಬರಾಜು ಯೋಜನೆಯು ಪ್ರಸ್ತುತ ಯಾವ ಹಂತದಲ್ಲಿದೆ ; ಈ ಯೋಜನೆಯು ಪ್ರಸ್ತುತ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಪುನಃ ಪ್ರಾರಂಭಿಸಲು ಯಾವ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು ;

(ಇ) ಇದಕ್ಕಾಗಿ ಬೇಕಾಗಬಹುದಾದ ಅನುದಾನವನ್ನು ೨೦೧೭–೧೮ನೇ ಸಾಲಿನ ಆಯವ್ಯಯದಲ್ಲಿ ನಿಗದಿಪಡಿಸಲು ಕ್ರಮವಹಿಸಲಾಗುವುದೇ ?

## ಕ್ರಷರ್‌ಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ. (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೩೯ (೧೪೯೦) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರಷರ್‌ಗಳ ಸಂಖ್ಯೆ ಎಷ್ಟು ಮತ್ತು ಯಾವುವು ; (ತಾಲ್ಲೂಕುವಾರು ವಿವರ ನೀಡುವುದು)

(ಆ) ಜನವಸತಿ ಪ್ರದೇಶಗಳಿಂದ ಎಷ್ಟು ಮೀಟರ್‌ಗಳ ಅಂತರದಲ್ಲಿ ಕ್ರಷರ್‌ಗಳ ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿದೆ ;

(ಇ) ಪ್ರಸ್ತುತ ತಂತ್ರಜ್ಞಾನಗಳನ್ನು ಬಳಸಿ ಕ್ರಷರ್‌ಗಳು ಕಾರ್ಯನಿರ್ವಹಿಸುತ್ತಿರುವುದರಿಂದ ಶಬ್ದ ಮತ್ತು ವಾಯುಮಾಲಿನ್ಯವನ್ನು ತಡೆಗಟ್ಟಬಹುದಾಗಿದ್ದು, ಗ್ರಾಮ, ಶಾಲೆ, ದೇವಸ್ಥಾನ ಮತ್ತು ಜನವಸತಿ ಪ್ರದೇಶಗಳಿಂದ ಅಂತರವನ್ನು ೫೦೦ ಮೀಟರ್‌ನಿಂದ ೨೫೦ ಮೀಟರ್‌ಗೆ ಇಳಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇಲ್ಲವಾದಲ್ಲಿ, ಕಾರಣಗಳೇನು ? (ಸಂಪೂರ್ಣ ವಿವರ ನೀಡುವುದು)

## ಗಣಿಗಾರಿಕೆಗೆ ಅನುಮತಿ ನೀಡುವಾಗ ಅಕ್ರಮಗಳು ನಡೆದಿರುವ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೦ (೧೪೯೫) ಗಣಿ ಮತ್ತು ಭೂ ವಿಜ್ಞಾನ ಹಾಗೂ ತೋಟಗಾರಿಕೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಕಡೆ ಗಣಿಗಾರಿಕೆ ನಡೆಸಲು ಯಾವ ಕಂಪನಿಗೆ ಅನುಮತಿ ನೀಡಲಾಗಿದೆ ; ಸರ್ಕಾರ ಅನುಮತಿ ನೀಡಿರುವ ಪ್ರದೇಶ ಹೊರತುಪಡಿಸಿ ಅಕ್ರಮವಾಗಿ ಗಣಿಗಾರಿಕೆ ನಡೆದಿದೆಯೇ ; (ಸಮಗ್ರ ವಿವರ ನೀಡುವುದು)

(ಆ) ಕಳೆದ ೨ ವರ್ಷದಿಂದ ಯಾವ ಯಾವ ಗಣಿಗಾರಿಕೆಗೆ ಹೊಸದಾಗಿ ಅನುಮತಿ ನೀಡಲಾಗಿದೆ ಮತ್ತು ಇದೇ ಅವಧಿಯಲ್ಲಿ ಯಾವ ಯಾವ ಗಣಿ ಗುತ್ತಿಗೆಯನ್ನು ನವೀಕರಣ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಗಣಿ ಗುತ್ತಿಗೆ ನವೀಕರಣಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು ; ಗುತ್ತಿಗೆ ನವೀಕರಣ ಮಾಡುವಾಗ ಎಷ್ಟು ಪ್ರಕರಣಗಳಲ್ಲಿ ಕಾನೂನು ಇಲಾಖೆಯ ಅಭಿಪ್ರಾಯ ಪಡೆಯಲಾಗಿದೆ ; ಕಾನೂನು ಇಲಾಖೆ ನೀಡಿರುವ ಅಭಿಪ್ರಾಯಗಳೇನು ;

(ಈ) ಎಷ್ಟು ಪ್ರಕರಣಗಳಲ್ಲಿ ಕಾನೂನು ಇಲಾಖೆ ವಿರುದ್ಧ ಅಭಿಪ್ರಾಯ ನೀಡಿದೆ ; ಕಾನೂನು ಇಲಾಖೆಯ ಅಭಿಪ್ರಾಯವನ್ನು ಬದಿಗಿರಿಸಿ ಗಣಿ ಗುತ್ತಿಗೆ

ನವೀಕರಣ ಮಾಡಿರುವ ಪ್ರಕರಣಗಳಲ್ಲಿ ಸರ್ಕಾರ ಯಾರ ವಿರುದ್ಧ ಏನು ಕ್ರಮ ಕೈಗೊಂಡಿದೆ ;

(ಉ) ಹೊಸದಾಗಿ ಗಣಿಗಾರಿಕೆಗೆ ಅನುಮತಿ ನೀಡುವಲ್ಲಿ ಮತ್ತು ಗಣಿ ಗುತ್ತಿಗೆ ನವೀಕರಣದಲ್ಲಿ ಅಕ್ರಮಗಳು ನಡೆದಿರುವ ಕುರಿತು ಆರೋಪಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕುರಿತು ಸರ್ಕಾರದ ಅಭಿಪ್ರಾಯವೇನು ?

## ಕೊಪ್ಪಳ ಜಿಲ್ಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಅಡಿಯಲ್ಲಿ ಬರುವ ಕೆರೆಗಳ/ಕೊಂಡಗಳ/ಕುಂಟೆಗಳ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೧ (೧೫೪೨) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ಜಿಲ್ಲೆಯಲ್ಲಿ ನಗರ ಸ್ಥಳೀಯ ಸಂಸ್ಥೆಗಳ (ನಗರಸಭೆ/ಪುರಸಭೆ/ಪಟ್ಟಣ ಪಂಚಾಯತ್) ಅಡಿಯಲ್ಲಿ ಒಟ್ಟು ಎಷ್ಟು ಕೆರೆಗಳು/ಕೊಂಡಗಳು/ಕುಂಟೆಗಳು ಇವೆ ; (ಇಲಾಖಾವಾರು ತಾಲ್ಲೂಕುವಾರು ಮಾಹಿತಿ ಒದಗಿಸುವುದು)

(ಆ) ಮೇಲ್ಕಂಡ ಇಲಾಖೆವಾರು ಪ್ರತಿ ಕೆರೆಯ ವಿಸ್ತೀರ್ಣ (ಎಕರೆ/ಹೆಕ್ಟೇರ್), ಜಲಸಂಗ್ರಹ ಸಾಮರ್ಥ್ಯ ಹಾಗೂ ನಿಗದಿತ ಬಫರ್ ವಲಯ ಎಷ್ಟು ; (ವಿವರಗಳನ್ನು ಒದಗಿಸುವುದು)

(ಇ) ಈ ಕೆರೆಗಳ ಸರ್ವೇ ಕಾರ್ಯವನ್ನು ಯಾವಾಗ ಕೈಗೊಳ್ಳಲಾಗಿದೆ ; ಎಷ್ಟು ಕೆರೆಗಳು ಅನಧಿಕೃತವಾಗಿ ಒತ್ತುವರಿಯಾಗಿವೆ ; ಕೆರೆವಾರು ಒತ್ತುವರಿಯಾಗಿರುವ ವಿಸ್ತೀರ್ಣವನ್ನು ಒದಗಿಸುವುದು ;

(ಈ) ಇದೇ ಅವಧಿಯಲ್ಲಿ ಎಷ್ಟು ಅಕ್ರಮ ಕಟ್ಟಡಗಳನ್ನು/ಒತ್ತುವರಿಯನ್ನು ಗುರುತಿಸಲಾಗಿದೆ ಮತ್ತು ಎಷ್ಟು ತೆರವುಗೊಳಿಸಲಾಗಿದೆ ; ಪ್ರಸ್ತುತ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು ;

(ಉ) ಕೆರೆ ಒತ್ತುವರಿಯನ್ನು ಯಾವ ಕಾಲಾವಧಿಯೊಳಗೆ ತೆರವುಗೊಳಿಸಲಾಗುವುದು ; ಒತ್ತುವರಿ ಮಾಡಿರುವವರ ವಿರುದ್ಧ ಯಾವ ಕಾನೂನು ಕ್ರಮಗಳನ್ನು ಕೈಗೊಳ್ಳಲಾಗುವುದು ?

## ಕೋಲಾರ ನಗರಸಭೆಯನ್ನು ಮೇಲ್ದರ್ಜೆಗೇರಿಸುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೨ (೧೫೧೩) ಪೌರಾಡಳಿತ ಮತ್ತು ಹಜ್ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೋಲಾರ ನಗರಸಭೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ, ಯಾವ ಕಾಲಮಿತಿಯೊಳಗೆ ಮೇಲ್ದರ್ಜೆಗೇರಿಸಲಾಗುವುದು ; (ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಕೋಲಾರ ತಾಲ್ಲೂಕಿನ ಗ್ರಾಮೀಣ ಸ್ವರೂಪ ಕಳೆದುಕೊಂಡಿರುವ ಗ್ರಾಮಗಳನ್ನು ಕೋಲಾರ ನಗರಸಭೆಗೆ ಸೇರಿಸುವ ಪ್ರಕ್ರಿಯೆ ಯಾವ ಹಂತದಲ್ಲಿದೆ ;

(ಇ) ರಾಜ್ಯದಲ್ಲಿ ಅವಧಿ ಮುಕ್ತಾಯವಾಗಿರುವ ನಗರಸಭೆ/ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳ ಚುನಾವಣೆಯನ್ನು ಯಾವ ಕಾಲಮಿತಿಯೊಳಗೆ ನಡೆಸಲಾಗುವುದು ;

(ಈ) ರಾಜ್ಯದ ನಗರಸಭೆ/ಪುರಸಭೆ ಹಾಗೂ ಪಟ್ಟಣ ಪಂಚಾಯತಿಗಳಲ್ಲಿ ಸಿಬ್ಬಂದಿ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸಿಬ್ಬಂದಿ ಕೊರತೆ ನಿವಾರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ?

## ನಗರಗಳಲ್ಲಿನ ಕುಡಿಯುವ ನೀರಿನ ಗುಣಮಟ್ಟವನ್ನು ಕಾಪಾಡುವ ಕುರಿತು

**ಡಾ: ಧನಂಜಯ ಸರ್ಜಿ (ಪದವೀಧರರ ಕ್ಷೇತ್ರ) –**

೧೬೩ (೧೫೦೮) ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ನಗರಗಳಲ್ಲಿನ ನೀರು ಸರಬರಾಜು ಘಟಕಗಳಲ್ಲಿ ಕುಡಿಯುವ ನೀರಿನ ಗುಣಮಟ್ಟವನ್ನು WHO ಹಾಗೂ BIS ಮಾನದಂಡಗಳಂತೆ ನಿಯಮಿತವಾಗಿ ಪರೀಕ್ಷಿಸಲಾಗುತ್ತಿದೆಯೇ ; ಇಲ್ಲದಿದ್ದಲ್ಲಿ, ಕಾರಣಗಳೇನು ;

(ಆ) ಜನರಿಗೆ ಯಾವ ಯಾವ ಮೂಲದಿಂದ ಹಾಗೂ ಯಾವ ವಿಧಾನಗಳಲ್ಲಿ ನೀರನ್ನು ಸರಬರಾಜು ಮಾಡಲಾಗುತ್ತಿದೆ ; ಯಾವ ರೀತಿಯ ಶುದ್ಧೀಕರಣ ಪ್ರಕ್ರಿಯೆಗಳನ್ನು ನಡೆಸಲಾಗುತ್ತಿದೆ ;

(ಇ) ರಾಜ್ಯದ ಪ್ರತಿ ಜಿಲ್ಲೆಗಳಲ್ಲಿಯೂ ಸುಸಜ್ಜಿತ ನೀರಿನ ಗುಣಮಟ್ಟ ಪರೀಕ್ಷಾ ಪ್ರಯೋಗಾಲಯಗಳನ್ನು ಸ್ಥಾಪಿಸಲು ಸರ್ಕಾರ ಯಾವ ಯೋಜನೆ ರೂಪಿಸಿದೆ ; ರೂಪಿಸಿದ್ದಲ್ಲಿ, ವಿವರ ನೀಡುವುದು ;

(ಈ) ನೀರು ಶುದ್ಧೀಕರಣ ಘಟಕಗಳಲ್ಲಿ ಪ್ರಿ–ಕ್ಲೋರಿನೇಷನ್ ಮತ್ತು ಪೋಸ್ಟ್ ಕ್ಲೋರಿನೇಷನ್ ಹಂತಗಳಲ್ಲಿ ಬಳಸುವ ಕ್ಲೋರಿನ್ ಪ್ರಮಾಣವನ್ನು ವೈಜ್ಞಾನಿಕವಾಗಿ ಅಳೆಯಲು ಆಧುನಿಕ ಉಪಕರಣಗಳನ್ನು ಹಾಗೂ ತರಬೇತಿ ಪಡೆದ ಸಿಬ್ಬಂದಿಯನ್ನು ನೇಮಿಸುವ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ನೀರು ಸರಬರಾಜು ಒವರ್ ಹೆಡ್ ಟ್ಯಾಂಕ್‌ಗಳನ್ನು ಎಷ್ಟು ದಿನಗಳಿಗೊಮ್ಮೆ ಸ್ವಚ್ಛ ಮಾಡಲಾಗುತ್ತಿದೆ ಹಾಗೂ ಇದಕ್ಕೆ ಇರುವ ಮಾನದಂಡಗಳೇನು ; ಯಾರಿಂದ–ಯಾವ ರೀತಿಯಲ್ಲಿ ಸ್ವಚ್ಛ ಮಾಡಲಾಗುತ್ತಿದೆ ;

(ಊ) ಕುಡಿಯುವ ನೀರಿನಿಂದ ಉಂಟಾಗುವ ರೋಗಗಳನ್ನು ತಡೆಗಟ್ಟುವ ಉದ್ದೇಶದಿಂದ ರಾಜ್ಯಮಟ್ಟದಲ್ಲಿ ಸಮಗ್ರ "Water Quality Monitoring and Public Health Protection Program" ಜಾರಿಗೆ ತರಲು ಸರ್ಕಾರ ಉದ್ದೇಶಿಸಿದೆಯೇ ; ಇದ್ದಲ್ಲಿ, ವಿವರ ನೀಡುವುದು ?

## ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳ ಸ್ಥಿತಿಗತಿ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೪ (೧೪೪೫) ಸಣ್ಣ ಕೈಗಾರಿಕೆ ಮತ್ತು ಸಾರ್ವಜನಿಕ ವಲಯ ಉದ್ಯಮಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ೨೦೨೩ ರಿಂದ ೨೦೨೫ರ ಅವಧಿಯಲ್ಲಿ ಎಷ್ಟು ಸಂಖ್ಯೆಯ ಸಣ್ಣ ಕೈಗಾರಿಕೆಗಳು ಮುಚ್ಚಲ್ಪಟ್ಟಿವೆ ; ಯಾವುವು ; ಕೈಗಾರಿಕೆವಾರು ಪ್ರತ್ಯೇಕ ಮಾಹಿತಿ ನೀಡುವುದು ;

(ಆ) ಸದರಿ ಕೈಗಾರಿಕೆಗಳು ಮುಚ್ಚಲು ಕಾರಣಗಳೇನು ; ಮತ್ತು ಅಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ ಎಷ್ಟು ; ಸದರಿ ಸಿಬ್ಬಂದಿಯನ್ನು ಎಲ್ಲಿಗೆ ನಿಯೋಜಿಸಿದೆ ;

(ಇ) ಸಣ್ಣ ಕೈಗಾರಿಕೆಗಳು ಪುನಶ್ಚೇತನ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ ; ಇದ್ದಲ್ಲಿ, ಇವುಗಳ ಪುನಶ್ಚೇತನಕ್ಕೆ ಮತ್ತು ಉದ್ಯೋಗ ಸೃಷ್ಟಿಗೆ ಸರ್ಕಾರ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ ; ಅವುಗಳ ಪುನಶ್ಚೇತನಕ್ಕೆ ಕಾಯ್ದಿರಿಸಿದ ಮೊತ್ತವೆಷ್ಟು ಹಾಗೂ ಇಲ್ಲಿಯವರೆಗೆ ಖರ್ಚು ಮಾಡಿದ ಮೊತ್ತವೆಷ್ಟು ; ಇಲ್ಲದಿದ್ದಲ್ಲಿ, ಕಾರಣಗಳನ್ನು ನೀಡುವುದು ?

## ಹುಬ್ಬಳ್ಳಿ–ಧಾರವಾಡ ಮಹಾನಗರಪಾಲಿಕೆ ವ್ಯಾಪ್ತಿಯ ನವೀನ್ ಹೋಟೆಲ್ ಗಾಲ್ಫ್ ಕ್ಲಬ್‌ಗೆ KIADB ವತಿಯಿಂದ ಮಂಜೂರಾದ ಜಮೀನಿನ ಕುರಿತು

**ಶ್ರೀ ಎಫ್.ಹೆಚ್. ಜಕ್ಕಪ್ಪನವರ್ (ನಾಮನಿರ್ದೇಶನ ಹೊಂದಿದವರು) –**

೧೬೫ (೧೪೪೨) ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹುಬ್ಬಳ್ಳಿ–ಧಾರವಾಡದ ನವೀನ್ ಹೋಟೆಲ್ ಗಾಲ್ಫ್ ಕ್ಲಬ್‌ಗೆ ಮಂಜೂರಾದ ಜಮೀನಿನ ವಿಚಾರದಲ್ಲಿ ಈ ಹಿಂದೆ ಬೆಳಗಾವಿಯಲ್ಲಿ ನಡೆದ ಚಳಿಗಾಲದ

ಅಧಿವೇಶನದಲ್ಲಿ ಕೇಳಿದ ಪ್ರಶ್ನೆಗೆ (ಪ್ರಶ್ನೆ ಸಂಖ್ಯೆ ೯೮) ಉತ್ತರಿಸುತ್ತಾ ಮಾನ್ಯ ಸಚಿವರು ಈ ಜಮೀನನ್ನು 'ಹಸಿರು ವಲಯ' (Green Zone) ಎಂದು ತಿಳಿಸಿದ್ದಾರೆ, ಆದರೆ ದಿನಾಂಕ:೦೮.೦೮.೨೦೨೪ರ ಮೂಲ ಖರೀದಿ ಪತ್ರದಲ್ಲಿ ಇಂತಹ ಯಾವುದೇ ಷರತ್ತಿನ ಉಲ್ಲೇಖವಿಲ್ಲದಿರಲು ಕಾರಣವೇನು ;

(ಆ) ಸರ್ಕಾರದ ಅಧಿಕೃತ ಉತ್ತರಕ್ಕೂ ಮತ್ತು ಸಬ್-ರಿಜಿಸ್ಟ್ರಾರ್ ಕಛೇರಿಯ ಖರೀದಿ ದಾಖಲೆಗಳಿಗೂ ಇರುವ ಈ ಗಂಭೀರ ವ್ಯತ್ಯಾಸಕ್ಕೆ ಹೊಣೆಗಾರರು ಯಾರು ; ಈ ಕುರಿತು ಮಾಹಿತಿ ಒದಗಿಸುವುದು ;

(ಇ) ೧೧೪ ಎಕರೆ ೧೭ ಗುಂಟೆ ಜಮೀನನ್ನು ಅಂದಿನ ಮಾರುಕಟ್ಟೆ ಮೌಲ್ಯಕ್ಕೆ ನೋಂದಾಯಿಸದೆ ಕೇವಲ ರೂ.೯೭,೬೧,೪೪೩ಕ್ಕೆ ನೋಂದಣಿ ಮಾಡಿದ್ದರಿಂದ ಸರ್ಕಾರಕ್ಕೆ ಬರಬೇಕಿದ್ದ ಸುಮಾರು ರೂ.೧೫೦ ಕೋಟಿ ಮುದ್ರಾಂಕ ಮತ್ತು ನೋಂದಣಿ ಶುಲ್ಕ ವಂಚನೆಯಾಗಿರುವುದರಿಂದ ಬೃಹತ್ ಪ್ರಮಾಣದ ರಾಜಸ್ವ ಸೋರಿಕೆ ನಿಜವಲ್ಲವೇ ;

(ಈ) ಮೂರು ದಶಕಗಳಿಂದಲೂ ಉದ್ದೇಶಿತ ಬಳಕೆಯಾಗದೆ, ಉಳಿದಿರುವ ಈ ಜಮೀನನ್ನು ಸರ್ಕಾರ ಕೂಡಲೇ ವಾಪಸ್ ಪಡೆಯಲು ಕ್ರಮ ಕೈಗೊಳ್ಳುವುದೇ ಮತ್ತು ಈ ಜಮೀನು ದುರ್ಬಳಕೆ ಮತ್ತು ಇಡೀ ಹಗರಣದ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಲು ಸರ್ಕಾರ ಸಿದ್ಧವಿದೆಯೇ ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ, ಬೆಂಗಳೂರು, ಕಾ.ಸೂ.790/ಪಿ5

**List of Questions for Oral Answers**

**Total No. of Questions - 15**

# LIST - 11

# KARNATAKA LEGISLATIVE COUNCIL

## ONE HUNDRED AND FIFTY EIGHTH SESSION

## (Adjourned Meetings)

## Tuesday, the 17th March, 2026

---

**GROUP - II**

1. Minister for Large and Medium Scale Industries and Infrastructure Development
2. Minister for Textiles, Sugarcane Development and Sugar and Agricultural Marketing
3. Minister for Small Scale Industries and Public Enterprises
4. Minister for Mines and Geology and Horticulture
5. Minister for Municipalities and Haj
6. Minister for Urban Development and Town Planning

---

### EFFICIENCY AND PROMOTION OF LARGE AND MEDIUM SCALE INDUSTRIAL UNITS IN KALABURAGI DISTRICT

**Sri Thippanappa Kamaknoor (Elected by Legislative Assembly) -**

151 (1539) Will the Minister for Large and Medium Scale Industries and Infrastructure Development be pleased to State :-

(a) the total number of large and medium scale industrial units in the limit of Kalaburagi district and the total annual installed capacity thereof ; (unitwise and sectorwise information be furnished)

(b) the percentage of average capacity utilization of major industries including cement and dall mills in the district at present ; whether there is a variations in the quantum of production during the last 3 years ;

(c) the number of the large and medium scale units that are sick or declining in the production in the said district ; whether the reason for the shortage of raw materials or infrastructure for the same ;

(d) whether the special "industrial cluster" or any incentive schemes have been implemented by the Government to increase the production and promote the exports there in by considering this district as a "Bele Nadu" and "Cement Hub" ;

(e) the number of export oriented units to abroad from Kalaburagi district and the contribution to the foreign exchange from these units during the last financial year ?

## LACK OF INFRASTRUCTURES

**Sri. N. Ravikumar (Elected by Legislative Assembly) -**

152 (1456) Will the Minister for Large and Medium Scale Industries and Infrastructure Development be pleased to State :-

(a) whether it has come to the notice of the Government that the several enterprises have turned their attention towards neighbouring States due to the lack of infrastructures in the State ; the stand of the Government in this regard ; (details be furnished)

(b) the number of new enterprises for which the land has been provided during the last two years ; the number of employments that have been generated from the same ; (details be furnished)

(c) the amount that has been invested during the last 3 years in the State ; the number of employments that have been generated from the same ? (details be furnished)

**WASTE MANAGEMENT OF VIJAYAPURA CITY**

**Sri. Keshava Prasad S. (Elected by Legislative Assembly) -**

153 (1540) Will the Minister for Urban Development and Town Planning be pleased to State:-

a) whether it has come to the notice of the Government that there is a heaps of garbage lying around various ancient historical monuments including the world famous Gol Gumbaz in Vijayapura city and the Hon'ble Lokayukta during his recent visit has expressed his utter displeasure about the lack of cleanliness ;

b) the reason for the failure of local corporation and concerned departments for the conservation of these monuments and to maintain the cleanliness of surrounding environment ; (complete information be furnished)

c) the emergency measures taken by the Government to dispose the waste that has been accumulated in the premises of the monuments after the visit and directions of the Lokayukta ;

d) the special plan or measures framed by the Government to prevent the dumping of waste in these areas and to maintain cleanliness permanently in view of dignity of historical monuments and tourism ?

**LOSS OCCURRED TO THE GOVERNMENT DUE TO ILLEGAL EXPORT**

**Sri. Govinda Raju (Elected by Legislative Assembly) -**

154 (1487) Will the Minister for Mines and Geology and Horticulture be pleased to State :-

(a) whether it is true that Rs.12.228 crores of loss has been occurred to the exchequer of the Government due to the illegal export of 2.98 crore tonnes of ore during the period from 2006 to 2010 according to the Lokayukta investigation estimate ; (complete information be furnished)

(b) if so, the particulars of individuals/organizations that have been committed this irregularity and the actions taken by the Government against them ;

(c) whether it is true that the looted amount worth of many lakhs of crores of rupees has not been accrued to the exchequer of the Government due to 92.4% of illegal mining cases have not been subjected to investigation ;

(d) if so, the particulars of the persons who are responsible for the same; the measures taken by the Government to recover the huge amount ? (complete information be furnished)

**UNDERGROUND DRIGAGE WORKS IN BHADRAVATHI CITY**

**Smt. Balkhees Banu (Elected by Legislative Assembly) -**

155 (1506) Will the Minister for Urban Development and Town Planning be pleased to State :-

(a) the year in which the underground drainage has been constructed under the KMRP (Karnataka Municipal Reforms Project) in Bhadravathi city and the grant that has been sanctioned ;

(b) the grant that has been released and spent to the underground drainage (UGD) in Bhadravathi old town ;

(c) the particular of agency which is responsible for the maintenance of the underground drainage (UGD) of Bhadravathi ; prevailing creterias for the same ;

(d) whether it has come to the notice of the Government that there are problems in the underground drainage (UGD) in Bhadravathi old town area; if so, the step taken by the Government ?

**ELIMINATION OF MISCONCEPTION ABOUT ARECANUT IS CARCINOGENIC**

**Sri. Prathap Simha Nayak K. (Elected by Legislative Assembly) -**

156 (1553) Will the Minister for Mines and Geology and Horticulture be pleased to State:-

(a) whether it has come to the notice of the Government that the misconception that arecanut and areca leaf plates are carcinogenic which has become a threat to the crop and it is inevitable to eliminate the stigma which is adhered to the arecanut through research ;

(b) if so, the measures taken by the Government for the comprehensive research regarding arecanut product till date ;

(c) since the people using arecanut for hundreds of years, there is an urgent need to propagate at the international level that arecanut is not harmful or carcinogenic, the details of the progress achieved by the Government in this regard ;

(d) in view of the negative conceptions being expressed at the international level with regard to arecanut, whether the systematic measures would be taken by the Government even at this stage to conduct comprehensive research regarding arecanut products ?

**PROVIDING GRANT FOR THE DEVELOPMENT OF INFRASTRUCTURE IN INDUSTRIAL AREAS**

**Dr. Umashree (Nominated) -**

157 (1549) Will the Minister for Large and Medium Scale Industries and Infrastructure Development be pleased to State :-

(a) whether the Government has contemplated with regard to providing special grant in the budget of this year for the development of infrastructure in industrial areas of the State ; if so, the grant that is being provided ;

(b) whether the Government has gave its attention with regard to establishment of industrial townships in the districts of the State ; if so, the grant that would be provided for the establishment of these industrial townships ; the date on which the same would be commenced ; (the details of its activities be furnished)

(c) whether the employment opportunities would be provided to the unemployed persons of the State from the establishment of these industrial townships ; if so, the number of people to whom the employment opportunity would be availed ?

**DRINKING WATER PROJECT TO MUDGAL TOWN**

**Sri. Sharanagouda Bayyapur (Local Authorities Constituency) -**

158 (1481) Will the Minister for Urban Development and Town Planning be pleased to State :-

(a) the present stage of the drinking water supply project which has been taken up by the Karnataka Urban Infrastructure Development and Finance Corporation (KUIDFC) in Mudgal town of Lingasugur taluk in Raichur district ; whether it has come to the notice of the Government that this project has been stopped at present ;

(b) if so, the steps that would be taken for the recommencement of the same ;

(c) whether the step would be taken to earmark required grant for this purpose in the budget for the year 2026-27 ?

**REGARDING CRUSHERS**

**Sri. Kushalappa M.P. (suja) (Local Authorities Constituency) -**

159 (1490) Will the Minister for Mines and Geology and Horticulture .be pleased to State :-

(a) the total number of crushers which are operating in Kodagu district and the particulars thereof ; (talukwise details be furnished)

(b) the length in meters of distance from the residential area for which the permission has been provided for the establishment of crushers ;

(c) at present the crushers are operating by using modern technologies thereby controlling the noise and air pollution, whether the proposal is before the Government to reduce the distance from the villages, schools, temples and residential areas from 500 meters to 250 meters; if not, the reasons for the same ? (complete details be furnished)

**IRREGULARITIES IN GRANTING MINING PERMISSION**

**Sri. C.T. Ravi (Elected by Legislative Assembly) -**

160 (1495) Will the Minister for Mines and Geology and Horticulture be pleased to State :-

(a) the number of places in which and the particulars of companies for which the permission has been accorded for mining in the State ; whether the illegal mining has been occurred excluding the areas that have been permitted by the Government ; (comprehensive details be furnished)

(b) the particulars of new minings for which the permission has been accorded during the last 2 years and the particulars of mining leases that have been renewed

during the same period ; (districtwise details be furnished)

(c) the criterias that is being complied for the renewal of mining lease ; the number of cases in which the opinion by the Law Department has been obtained during renewal of the lease ; the particulars of opinions by the Law Departmen t;

(d) the number of cases in which the adverse opinion has been given by the Law Department ; out of the cases that have been renewed to mining lease by keeping aside the opinions of the Law Department, the persons against whom the action has been taken by the Government ;

(e) whether it has come to the notice of the Government that there are allegations with regard to irregularities have been occurred while granting new mining permissions and renewal of mining leases; the opinions of the Government in this regard ?

**REGARDING LAKES/STREAM/ PONDS IN KOPPAL DISTRICT**

**Smt. Hemalatha Nayak (Elected by Legislative Assembly) -**

161 (1542) Will the Minister for Municipalities and Haj be pleased to State :-

(a) the total number of lakes/streams/ponds which are coming under the urban local bodies (City Municipal Councils/Town Municipal Councils/Town Panchayats) in Koppal districts ; (departmentwise and talukwise information be furnished)

(b) the extent of each lake (acres/hectares), water storage capacity and designated buffer zone as per the above departmentwise ; (details be furnished)

(c) the date on which the survey work of these lakes has been taken up ; the number of lakes that have been illegally encroached ; the extent of lakewise encroachment be furnished ;

(d) the number of illegal building/encroachment that have been identified and the number of eviction thereof in the same period ; the number of cases that have been pending currently ;

(e) the timelimit within which the encroachment of lakes would be evicted ; the details of the legal action that would be taken against the person who have encroached the same ?

**UPGRADATION OF KOLAR CITY MUNICIPAL COUNCIL**

**Sri. M.L. Anil Kumar (Local Authorities Constituency) -**

162 (1513) Will the Minister for Municipalities and Haj be pleased to State :-

(a) whether the proposal is before the Government to upgrade the Kolar City Municipal Council ; if so, the timelimit within which the same would be upgraded ; (complete information be furnished)

(b) the present stage of merging process of the villages which have lost their rural scope in Kolar taluk into the Kolar City Municipal Council ;

(c) the timelimit within which the elections would be conducted for the City Municipal Councils/Town Municipal Councils and Town Panchayats in the State for which their term has been elapsed ;

(d) whether it has come to the notice of the Government that there is a shortage of staff in the City Municipal Councils/Town Municipal Councils and Town Panchayats of the State; if so, the steps taken by the Government to resolve the shortage of the Staff ?

## MAINTAINING OF DRINKING WATER QUALITY IN CITIES

**Dr.Dhananjaya Sarji (Graduates' Constituency) -**

163 (1508) Will the Minister for Urban Development and Town Planning be pleased to State :-

(a) whether the quality of drinking water in the water supply units in the cities of the State is being tested regularly as per the WHO (World Health Organisation) and BIS (Bureau of Indian Standard) standards: if not, the reasons for the same ;

(b) the particulars of sources and the methods in which the water is being supplied to the people ; the manner in which the purification process is being carried out ;

(c) whether the plan has been chalkedout by the Government to establish the well equipped water quality testing laboratories in every district of the State ; if so, the details be furnished ;

(d) the steps taken by the Government to provide the modern equipment to measure the amount of chlorine scientifically that has been used in the Pre-chlorination and post-chlorination stages in water purification units and to appoint the trained staff ;

(e) once in a number of days in which the water supply overhead tanks are being cleaned and the prevailing criterias for the same ; the particulars of persons from whom and the manner in which it is being cleaned ;

(f) whether the Government has intended to implement the comprehensive "water quality monitoring and public health protection programme" in the State in view of preventing diseases that has been caused from drinking water ; if so, details be furnished ?

## CONDITION OF SMALL SCALE INDUSTRIES IN THE STATE

**Sri. Sharavana T.A. (Elected by Legislative Assembly) -**

164 (1485) Will the Minister for Small Scale Industries and Public Enterprises be pleased to State :-

(a) the number of small scale industries that have been shutdown in the State during the period from 2023 to 2025 ; the particulars thereof ; industrywise separate information be furnished ;

(b) the reasons for shutdown of the said industries ; and the number of staff who are working there ; the places where the said staff have been deputed ;

(c) whether the proposal is before the Government for the revival of the Small Scale Industries ; if so, the particulars of schemes that have been chalkedout by the Government for their revival and job creation ; the amount that has been earmarked for their revival and the amount that has been spent so far ; if not, the reasons be furnished ?

## LAND GRANTED BY KIADB

**Sri. F.H. Jakkappanavar (Nominated) -**

165 (1482) Will the Minister for Large and Medium Scale Industries and Infrastructure Development be pleased to State :-

(a) the Hon'ble Minister while giving reply to the question (Question No-98) in the winter season held at Belagavi earlier in the matter of the land that has been granted for Naveen hotel golf club of Hubballi-Dharwad, stated that the said land is belongs to "green zone", the reasons for there is no such kind of terms of reference in the sale deed of 08.08.2024 ;

(b) the persons who are responsible for this serious difference between the official reply of the Government and the purchase records of the sub-registrars office ; in this regard the information be furnished ;

(c) whether it is true that huge quantum of revenue has been drained out due to about Rs.150 crore stamp and registration fee has been evaded that would have been accrued to the exchequer of the Government since 114 acre 17 gunta of land has been registered only for Rs.97,61,443 without registering the same with the then market value ;

(d) whether the step would be taken by the Government to withdraw this remaining land immediately which has been unutilised for the proposed purpose from three decades and whether the Government is ready to conduct the high level investigation with regard to misusing of this land and whole scandal ?

**K.R. MAHALAKSHMI**
Secretary
Karnataka Legislative Council

Govt. Press, Vikasa Soudha Unit, Bengaluru, WD-790/P5